# ಕಲಾ ಶಿಕ್ಷಣ

'ಕಲಾ ಶಿಕ್ಷಣ' ಕಾರ್ಯಕ್ರಮವು ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐಎಫ್ಎ) ನಿರ್ವಹಿಸುವ ಒಂದು ಪ್ರಮುಖ ಕಾರ್ಯಕ್ರಮವಾಗಿದೆ. 1998–99 ರಲ್ಲಿ ಪ್ರಾರಂಭಗೊಂಡ ಈ ಯೋಜನೆಯು ವಿದ್ಯಾರ್ಥಿಗಳ ಶಾಶ್ವತ ಕಲಿಕೆಯ ದಾಹವನ್ನು ಕಲೆಯಿಂದಷ್ಟೇ ತಣಿಸಲು ಸಾಧ್ಯ ಎಂದು ತೀವ್ರವಾಗಿ ನಂಬಿದೆ. ಈ ಕಾರ್ಯಕ್ರಮವನ್ನು 2008–09 ರಲ್ಲಿ ಸಮಿತಿಯ ಪರಿಶೀಲನೆಗೆ ಒಳಪಡಿಸಿ ಸೂಚಿಸಿದ ಕೆಲವು ಶಿಫಾರಸ್ಸುಗಳ ಆಧಾರದ ಮೇಲೆ ಕಲಾ ಶಿಕ್ಷಣ ಕಾರ್ಯಕ್ರಮವನ್ನು 'ಕಲಿಕಲಿಸು' ಎಂದು ಮರುಹೆಸರಿಸಲಾಯಿತು.

ಕಲಿಕಲಿಸು ಕಾರ್ಯಕ್ರಮವು ಕರ್ನಾಟಕದ ಸರ್ಕಾರಿ ಶಾಲಾ ಶಿಕ್ಷಕರಿಗೆ ಕಲಾಧಾರಿತ ಬೋಧನೆಯ ತರಬೇತಿಯನ್ನು ಮತ್ತು ಕಲಾವಿದರು ಹಾಗೂ ಶಿಕ್ಷಕರು ತಮ್ಮ ಶಾಲಾ ಪರಿಸರದ ಕಲಾತ್ಮಕ ಹಾಗೂ ಸಾಂಸ್ಕೃತಿಕ ಸನ್ನಿವೇಶಗಳನ್ನು ಬಳಸಿಕೊಂಡು ಅನುಷ್ಠಾನಗೊಳಿಸುವ ಯೋಜನೆಗಳಿಗೆ ಪ್ರೋತ್ಸಾಹ ನೀಡುತ್ತದೆ. ಕರ್ನಾಟಕದಲ್ಲಿ ಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಹೆಚ್ಚು ಪರಿಣಾಮಕಾರಿಯಾಗಿಸಲು ಐಎಫ್ಎ ಸಂಸ್ಥೆಯು ಸಾರ್ವಜನಿಕ ಶಿಕ್ಷಣ ಇಲಾಖೆಯೊಂದಿಗೆ ನಿರಂತರ ಸಂಪರ್ಕವನ್ನು ಹೊಂದಿದೆ. ಕಲಿಕಲಿಸು ಕಾರ್ಯಕ್ರಮವು ವಿದ್ಯಾರ್ಥಿಗಳ ಸರ್ವತೋಮುಖ ವಿಕಾಸದ ಭಾಗವಾಗಿ ಕಲಾ ಶಿಕ್ಷಣವನ್ನು ನೋಡುವ ವಿಶಿಷ್ಟ ದೃಷ್ಟಿಕೋನವನ್ನು ಹೊಂದಿದೆ. ಇದರಿಂದ ವಿದ್ಯಾರ್ಥಿಗಳು ಕಲಿಯುವ ಸಂತಸವನ್ನು ಪಠ್ಯಕ್ರಮದ ಒಳಹೊರಗೆ ಕಂಡುಕೊಳ್ಳುವರು. ಶಿಕ್ಷಕರು ಸ್ಥಳೀಯ ಕಲಾ ಮತ್ತು ಸಾಂಸ್ಕೃತಿಕ ಪದ್ಧತಿಗಳನ್ನು ಅನ್ವೇಷಿಸುವ ಹಾಗೂ ಮಕ್ಕಳ ಜೀವಂತ ಅನುಭವಗಳನ್ನು ಪಠ್ಯವಸ್ತುವಿನೊಂದಿಗೆ ಸಂಯೋಜಿಸುವ ಪ್ರಕ್ರಿಯೆಯಲ್ಲಿ ಕಲಿಕಲಿಸು ಕಾರ್ಯಕ್ರಮ ನೆರವಾಗುತ್ತದೆ. ಮಕ್ಕಳು ವಿವಿಧ ಕೌಶಲ್ಯಗಳನ್ನು, ಸಮಗ್ರವಾದ ಬೌದ್ಧಿಕ ಹಾಗೂ ಭಾವನಾತ್ಮಕ ವಿಕಾಸವನ್ನು ಕಟ್ಟಿಕೊಳ್ಳುವಲ್ಲಿ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ, ಆಡಳಿತಗಾರರಿಗೆ ಹಾಗೂ ಸಮುದಾಯಗಳಿಗೆ ಶಾಲೆಯು ಕಲಿಕಾಕೇಂದ್ರವಾಗಿದೆ.

2021ರಲ್ಲಿ ಕಲಿಕಲಿಸು ಕಾರ್ಯಕ್ರಮವು ಕೆ.ಎನ್. ಗಣೇಶಯ್ಯ, ನಂದಿನಿ ಮಂಜ್ರೇಕರ್ ಹಾಗೂ ಪ್ರೇಮಾ ರಂಗಾಚಾರಿಯವರನ್ನು ಒಳಗೊಂಡಿದ್ದ ತಜ್ಞರ ಸಮಿತಿಯ ಪರಿಶೀಲನೆಗೆ ಒಳಪಟ್ಟಿತ್ತು. ಇದರ ಜೊತೆಗೆ ಕ್ಷೇತ್ರ ವರದಿಗಳನ್ನು ಆಧರಿಸಿ ಸಂಶೋಧಕರು ಶಿಕ್ಷಕರೊಂದಿಗೆ ಕಲಾವಿದರೊಂದಿಗೆ ಹಾಗೂ ಆಡಳಿತಗಾರರೊಂದಿಗೆ ನಡೆಸಿದ ಸಂದರ್ಶನಗಳನ್ನು ಈ ಸಮಿತಿ ಗಮನಿಸಿದೆ. ಅಂತಿಮವಾಗಿ ಈ ಪರಿಶೀಲನಾ ಸಮಿತಿ ನೀಡಿದ ಸಲಹೆಗಳು ಶಿಫಾರಸ್ಸುಗಳು ನಾವು ಮುಂದಿನ ಐದು ವರ್ಷಗಳ (2022–23 ರಿಂದ 2026–27) ಕಲಿಕಲಿಸು ಪ್ರಯಾಣವನ್ನು ರೂಪಿಸುವ ನಕಾಶೆಯನ್ನು ಒದಗಿಸಿದೆ.

ಈ ಅವಧಿಯಲ್ಲಿ ಕಾರ್ಯಕ್ರಮವು ಮುಖ್ಯವಾಗಿ ಮೂರು ಕ್ಷೇತ್ರಗಳಲ್ಲಿ ತನ್ನ ಕಾರ್ಯಯೋಜನೆಗಳನ್ನು ರೂಪಿಸಿದೆ: ಸಾಮರ್ಥ್ಯ ಅಭಿವೃದ್ಧಿ, **ಶಾಲೆಗಳಲ್ಲಿ ಕಲಾ ಯೋಜನೆಗಳು ಹಾಗೂ ವಿಸ್ತರಣೆ**

**ಸಾಮರ್ಥ್ಯ ಅಭಿವೃದ್ಧಿ** : ಶಿಕ್ಷಕರು ಕಲಾ ಶಿಕ್ಷಣದ ಸಂಯೋಜಿತ ವಿಧಾನಗಳ ಬಗೆಗಿನ ಕೌಶಲ್ಯಗಳು ಹಾಗೂ ಜ್ಞಾನವನ್ನು ಹೊಂದುವುದು.

- **ಕರ್ನಾಟಕದ ಶಿಕ್ಷಕರ ತರಬೇತಿ** : ಕಲಾಂತರ್ಗತ ಬೋಧನಾ ವಿಧಾನಗಳನ್ನು ಜೊತೆಗೆ ಶಿಕ್ಷಕರ ಸ್ಥಳೀಯ ಹಾಗೂ ಸಾಂದರ್ಭಿಕ ಅಗತ್ಯಗಳನ್ನು ಚರ್ಚಿಸುವ ಸನಿವಾಸ ತರಬೇತಿಗಳ ಆಯೋಜನೆ.
- **ಅಂತರರಾಜ್ಯ ಶಿಕ್ಷಕರ ತರಬೇತಿ** : ಕರ್ನಾಟಕವೂ ಸೇರಿದಂತೆ ಇನ್ನೊಂದು ನೆರೆಯ ರಾಜ್ಯದ ಶಿಕ್ಷಕರನ್ನು ಒಳಗೊಂಡ ಕಲೆ ಸಂಸ್ಕೃತಿಗಳ ವಿನಿಮಯವನ್ನು ಹೊಂದಾಣಿಕೆಯನ್ನು ಭಾಷೆ ಹಾಗೂ ಇತಿಹಾಸದ ದೃಷ್ಟಿಯಿಂದ ಅರಿಯಲು ನೆರವಾಗುವ ಸನಿವಾಸ ತರಬೇತಿಗಳ ಆಯೋಜನೆ.
- **ಅಂತರರಾಜ್ಯ ಮಾಸ್ಟರ್ ಸಂಪನ್ಮೂಲ ವ್ಯಕ್ತಿಗಳ ತರಬೇತಿ** : ವೃತ್ತಿಪರ ಸಾಮರ್ಥ್ಯಗಳನ್ನು ಮತ್ತು ಕಲಾ ಶಿಕ್ಷಣದ ವಿವಿಧ ಆಯಾಮಗಳನ್ನು ವಿಮರ್ಶಾತ್ಮಕವಾಗಿ ಪ್ರತಿಬಿಂಬಿಸುವ ತರಬೇತಿಗಳನ್ನು ಈ ಮೊದಲೇ ಪಡೆದಿರುವ ಆಯ್ದ ಶಿಕ್ಷಕರಿಗೆ ಉತ್ಕೃಷ್ಟ ಮಟ್ಟದ ತರಬೇತಿಗಳ ಆಯೋಜನೆ
- **ಆಧ್ಯತೆಯ ಪ್ರವಾಸಗಳು:** ಯೋಜನಾ ಸಂಯೋಜಕರಿಗೆ ತಮ್ಮ ಕಲಾ ದಕ್ಷತೆಯನ್ನು ಹೆಚ್ಚಿಸಿಕೊಳ್ಳಲು ಅನುವಾಗುವಂತೆ ಕ್ಷೇತ್ರ ಪ್ರವಾಸಗಳನ್ನು ಹಮ್ಮಿಕೊಳ್ಳುವುದು.

**ಶಾಲೆಗಳಲ್ಲಿ ಕಲಾ ಯೋಜನೆಗಳು:** ತರಗತಿ ಕೋಣೆಗಳ ಸಂದರ್ಭದಲ್ಲಿ ಕಲಾಂತರ್ಗತ ಕಲಿಕಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಶಿಕ್ಷಕರಿಗೆ, ಕಲಾವಿದರಿಗೆ ಹಾಗೂ ಶಾಲೆಗೆ ನೆರವಾಗುವುದು.

- **ಶಿಕ್ಷಕರ ಯೋಜನೆಗಳು:** ಕರ್ನಾಟಕದ ಸರ್ಕಾರಿ ಶಾಲೆಗಳ ಶಿಕ್ಷಕರಿಂದ ಕಲಾ ಯೋಜನೆಗಳ ಪ್ರಸ್ತಾವನೆಗಳಿಗಾಗಿ ವಾರ್ಷಿಕ ಕರೆ ನೀಡಲಾಗುತ್ತದೆ ಹಾಗು ಆಯ್ಕೆಯಾದ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತದೆ.
- **ಕಲಾವಿದರ ಯೋಜನೆಗಳು:** ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ಕಲಾವಿದರು ಹಮ್ಮಿಕೊಳ್ಳುವ ಕಲಾ ಯೋಜನೆಗಳ ಪ್ರಸ್ತಾವನೆಗಳಿಗಾಗಿ ವಾರ್ಷಿಕ ಕರೆ ನೀಡಲಾಗುತ್ತದೆ ಹಾಗು ಆಯ್ಕೆಯಾದ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತದೆ.
- **ರಾಷ್ಟ್ರೀಯ ಮಟ್ಟದ ಶಾಲಾ ಯೋಜನೆಗಳು:** ರಾಷ್ಟ್ರೀಯ ಮಟ್ಟದಲ್ಲಿ ಶಾಲೆಗಳಿಂದ ಕಲಾ ಯೋಜನೆಗಳ ಪ್ರಸ್ತಾವನೆಗಳಿಗಾಗಿ ವಾರ್ಷಿಕ ಕರೆ ನೀಡಲಾಗುತ್ತದೆ.

**ವಿಸ್ತರಣೆ:** ಕಲಾ ಕ್ಷೇತ್ರದಲ್ಲಿನ ವಿವಿಧ ಭಾಗೀದಾರರನ್ನು ಕಾರ್ಯತತ್ಪರರನ್ನಾಗಿಸುವುದು ಹಾಗೂ ಕಲಾ ಯೋಜನೆಗಳ, ಕಾರ್ಯಕ್ರಮಗಳ ಕುರಿತಾದ ಮಾಹಿತಿಯನ್ನು ಪ್ರಸಾರಮಾಡುವುದು

- **ಸಮ್ಮೇಳನಗಳು:** ಬೋಧನಾಶಾಸ್ತ್ರದ ತಜ್ಞರು, ಕಲಾ ಶಿಕ್ಷಣದ ಅಧ್ಯಾಪಕರು, ವಸ್ತು ಸಂಗ್ರಹಾಲಯ – ಗ್ಯಾಲರಿಗಳ ಮಾರ್ಗದರ್ಶಕರು, ಕಲಾವಿದರು, ಸಾಂಸ್ಕೃತಿಕ ಸಂಸ್ಥೆಗಳ ಪ್ರತಿನಿಧಿಗಳು ಮುಂತಾದವರು ಕಲಾ ಕ್ಷೇತ್ರದ ಇತ್ತೀಚಿನ ಬೆಳವಣಿಗೆಗಳ ಕುರಿತು ವಿಚಾರ ಮಂಡಿಸಲು ಒಂದು ಅಂತರಶಿಸ್ತೀಯ ವೇದಿಕೆಯನ್ನು ಸೃಷ್ಟಿಸುವುದು. ಇಲ್ಲಿ ಮಂಡಿಸಲಾಗುವ ವಿಚಾರಗಳು ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡುವುದು.
- **ಕಲಾಯಾತ್ರೆಗಳು** : ಕರ್ನಾಟಕದ ಆಯ್ದ ಜಿಲ್ಲೆಗಳ ತಾಲ್ಲೂಕುಗಳಲ್ಲಿ ನೆಡೆಯುವ ಕಲಾ ಶಿಕ್ಷಣದ ಬೋಧನಾ ಪ್ರಕ್ರಿಯೆಗಳ ಮಾದರಿಗಳನ್ನು ಪ್ರಚಾರ ಮಾಡುವ ಅದರೊಂದಿಗೆ ಶಿಕ್ಷಕರನ್ನು ಹಾಗೂ ವಿದ್ಯಾರ್ಥಿಗಳನ್ನು ಮುಖಾಮುಖಿಯಾಗಿಸುವ ಒಂದು ಸಂಚಾರಿ ಕಾರ್ಯಕ್ರಮ.
- **ಹೆಜ್ಜೆಗಳು** : ಐಎಫ್ಎ ಕಲಿಕಲಿಸು ಯೋಜನೆಯ ಮುಖಾಂತರ ಕಾರ್ಯಗತಗೊಳಿಸುವ ಯೋಜನೆಗಳ ಯಶೋಗಾಥೆಗಳ ಒಂದು ವಾರ್ಷಿಕ ಪ್ರಕಟಣೆ. ಯೋಜನಾ ಸಂಯೋಜಕರನ್ನು ಒಳಗೊಂಡ ಸಂಪಾದಕ ಸಮಿತಿ ಈ ಹೆಜ್ಜೆಗಳು ಸಂಚಿಕೆಯನ್ನು ರೂಪಿಸುತ್ತದೆ.

2022–23 ನೇ ಸಾಲಿಗೆ ಶಿಕ್ಷಕರಿಂದ ಹಾಗೂ ಕಲಾವಿದರಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ.

ಕಾರ್ಯಕ್ರಮದ ಕುರಿತಾದ ಪ್ರಶ್ನೆಗಳಿದ್ದಲ್ಲಿ ಇಲ್ಲಿಗೆ ಮೇಲ್ ಮಾಡಿ. krishna@indiaifa.org

radhika@indiaifa.org

2009–10 ರಿಂದ 2015–16 ರವರೆಗಿನ ಕಲಾ ಶಿಕ್ಷಣ ಕಾರ್ಯಕ್ರಮವನ್ನು ಗೋಥೆ ಇನ್ಸ್ಟಿಟ್ಯೂಟ್ / ಮ್ಯಾಕ್ಸ್ ಮುಲ್ಲರ್ ಭವನ, ಬೆಂಗಳೂರು ಇವರು ಬೆಂಬಲಿಸಿದ್ದಾರೆ.

2016–17 ರಿಂದ 2021–22 ರವರೆಗಿನ ಕಲಾ ಶಿಕ್ಷಣ ಕಾರ್ಯಕ್ರಮವನ್ನು ಸಿಟಿ ಇಂಡಿಯಾ ಇವರು ಬೆಂಬಲಿಸಿದ್ದಾರೆ.